**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ**

**ಸಿ. ಸಿ. ನಂ.842/2022**

| | |
|---|---|
| **ಪಿರ್ಯಾಧಿದಾರರುಃ** | ಶ್ರೀ ದಿನೇಶ್ ಹೆಚ್ ಎಸ್ ಬಿನ್ ಲೇಟ್ ಸುಬ್ಬೆಗೌಡ, ಸುಮಾರು 56 ವರ್ಷ, ವ್ಯವಸಾಯಗಾರರು, ವಾಸ ಹಂಚಿಕೊಳಲು, ಹೇರಾಂಬಪುರ ಗ್ರಾಮ, ಕಲ್ಕೆರೆ ಅಂಚೆ, ಕೊಪ್ಪ ತಾಲ್ಲೂಕು. |

**-ವಿರುದ್ಧ -**

| | |
|---|---|
| **ಆರೋಪಿಃ** | ಶ್ರೀ ಇಸ್ಮಾಯಿಲ್ ಬಿನ್ ಉನ್ನಿಬ್ಯಾರಿ, ಸುಮಾರು 55 ವರ್ಷ, ಮೀನು ವ್ಯಾಪಾರಿ, ವಾಸ ಉದಯನಗರ, ಕೊಪ್ಪ ಗ್ರಾಮ ಮತ್ತು ಅಂಚೆ, ಕೊಪ್ಪ ತಾಲ್ಲೂಕು- 577126. |

**ಆರೋಪಣೆ**

ಆರೋಪಿಯಾದ ನೀವು ಪಿರ್ಯಾದುದಾರರಿಗೆ ನೀಡಬೇಕಾಗಿದ್ದ ರೂ.2,45,000/- ಗಳ ಮರುಪಾವತಿಗಾಗಿ ನೀವು ನಿಮ್ಮ ಬಾಬ್ತು ಅವರಿಗೆ ಚೆಕ್ ನಂ. 007865, ದಿನಾಂಕ 20.05.2022 ನ್ನು ನಮೂದಿಸಿದ ಯೂನಿಯನ್ ಬ್ಯಾಂಕ್ ಅಪ್ ಇಂಡಿಯಾ, ಎಸ್.ವಿ.ಟಿ. ರಸ್ತೆ, ಕೊಪ್ಪ ಶಾಖೆಯ ಒಂದು ಚೆಕ್ಕನ್ನು ನೀಡಿದ್ದು, ಅವರು ಸದರಿ ಚೆಕ್ಕನ್ನು ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಕೊಪ್ಪ ಶಾಖೆಗೆ ಹಾಜರುಪಸಿದಾಗ ನಿಮ್ಮ **ಖಾತೆಯಲ್ಲಿ ಸಾಕಷ್ಟು ಹಣವಿಲ್ಲ** ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 07.09.2022 ರಂತೆ ವಕೀಲರ ನೋಟೀಸು ನೀಡಿದ್ದು, ಸದರಿ ನೋಟೀಸು ದಿನಾಂಕ 09.09.2022 ರಂದು ನಿಮಗೆ ಜಾರಿಯಾಗಿದ್ದೂ ಸಹ ನೀವು ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ ತಿಳಿಯಿತು

ಪ್ರಶ್ನೆ 2ಃ- ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಡೀಕರಿಸುತ್ತೇನೆ.

ದಿನಾಂಕಃ 01.07.2025

ಸಹಿ/- 01.07.2025
(ಎಂ.ಎನ್. ನಂದಿನಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಪ್ಪ